ಕಾರ್ಯದರ್ಶಿ/ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಂಗಳೂರು–02.

ದೂರವಾಣಿ: 080–22483434, ಫ್ಯಾಕ್ಸ್–080–22483860, ಇ–ಮೈಲ್ ವಿಳಾಸ–**kstbf63@gmail.com**

ಸಂ:ಶಿಕನಿ/09/ಆ2/ಸಹಪಠ್ಯ ಚಟುವಟಿಕೆ/20/15–16 ದಿನಾಂಕ: 25..11.2015

## ಸುತ್ತೋಲೆ

**ವಿಷಯ:** 2015–16 ನೇ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ರಾಜ್ಯ ಮಟ್ಟದ ಸಹಪಠ್ಯ ಚಟುವಕೆಗಳ ಸ್ಪರ್ಧೆಗಳನ್ನು ಆಯೋಜಿಸುವ ಬಗ್ಗೆ.

**ಉಲ್ಲೇಖ:** 1. ಆಯುಕ್ತರು, ಸಾ.ಶಿ.ಇ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಶಿಕನಿ/ಆ2/ 09/ ಸಹಪಠ್ಯ ಚಟುವಟಿಕೆ/20/15–16 ದಿನಾಂಕ:17.08.2015.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2015–16 ನೇ ಸಾಲಿನಲ್ಲಿ **ಪ್ರಾಥಮಿಕ ಶಾಲಾ ಶಿಕ್ಷಕರ ರಾಜ್ಯ ಮಟ್ಟದ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ದಿನಾಂಕ: 17.12.2015 ಹಾಗೂ ಪ್ರೌಢಶಾಲಾ ಶಿಕ್ಷಕರ ರಾಜ್ಯ ಮಟ್ಟದ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ದಿನಾಂಕ : 18.12.2015 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ದಾವಣಗೆರೆ (ಬಸ್‌ಸ್ಟಾಂಡ್ / ರೈಲ್ವೆಸ್ಟೇಷನ್ ಹತ್ತಿರ)** ಇಲ್ಲಿ ಆಯೋಜಿಸಲು ತೀರ್ಮಾನಿಸಲಾಗಿರುತ್ತದೆ. ಸದರಿ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ಜಿಲ್ಲೆ ಇವರಿಗೆ ವಹಿಸಲಾಗಿದೆ.

ಉಲ್ಲೇಖಿತ–1ರ ಪತ್ರದನ್ವಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ನಡೆಸಿ, ಪ್ರತೀ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ವಿಜೇತರಾದ ಶಿಕ್ಷಕರ ಪಟ್ಟಿಯನ್ನು ಅನುಬಂಧ–3 ಮತ್ತು 3(ಎ) ರಲ್ಲಿ (ಎಂ.ಎಸ್.ಎಕ್ಸೆಲ್‌ನಲ್ಲಿ) ಸಿದ್ದಪಡಿಸಿ ಸಾಫ್ಟ್ ಪ್ರತಿಯನ್ನು ಈ ಕಛೇರಿಯ ಇ–ಮೇಲ್ ವಿಳಾಸ: kstbf63@gmail.com, ಉಪನಿರ್ದೇಶಕರ ಕಛೇರಿ, ದಾವಣಗೆರೆ ರವರ ಇ–ಮೇಲ್ ವಿಳಾಸ: ddpidavanagere@gmail.com ಹಾಗೂ ssadavanagere@gmail.com ಕ್ಕೆ ಹಾಗೂ ಹಾರ್ಡ್ ಪ್ರತಿಯನ್ನು ಈ ಕಛೇರಿಗೆ ಹಾಗೂ ಉಪನಿರ್ದೇಶಕರ ಕಛೇರಿ (ಆಡಳಿತ) ದಾವಣಗೆರೆ ಇಲ್ಲಿಗೆ ಈ ಪತ್ರ ತಲುಪಿದ ಕೂಡಲೇ ಕಳುಹಿಸಲು ಕೋರಿದೆ. ವಿಜೇತರ ಪಟ್ಟಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದಲ್ಲಿ ಅಂತಹ ಜಿಲ್ಲೆಗಳಿಂದ ಸ್ಪರ್ಧಿಗಳು ಇಲ್ಲ ಎಂದು ಪರಿಗಣಿಸಲಾಗುವುದು. ಇದಕ್ಕೆ ಸಂಬಂಧಿಸಿದ ಉಪನಿರ್ದೇಶಕರು/ನೋಡಲ್ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.

ವಿಜೇತರಾದ ಶಿಕ್ಷಕರಿಗೆ ಈ ಕೆಳಕಂಡಂತೆ ಮಾಹಿತಿಯನ್ನು ನೀಡಿ, ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಸೂಚನೆ ನೀಡುವಂತೆ ಕೋರಿದೆ.

- ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ರಾಜ್ಯಮಟ್ಟದ ಸ್ಪರ್ಧೆಗಳು ದಿನಾಂಕ: 17.12.2015 ರಂದು ನಡೆಯಲಿದ್ದು ದಿನಾಂಕ: 16.12.2015 ರಂದು ಸಂಜೆ 6.00 ಗಂಟೆ ಒಳಗಾಗಿ ನಿಗದಿತ ಸ್ಥಳದಲ್ಲಿ ವರದಿ ಮಾಡಿಕೊಳ್ಳುವುದು.
- ಪ್ರೌಢಶಾಲಾ ಶಿಕ್ಷಕರಿಗಾಗಿ ರಾಜ್ಯಮಟ್ಟದ ಸ್ಪರ್ಧೆಗಳು ದಿನಾಂಕ: 18.12.2015 ರಂದು ನಡೆಯಲಿದ್ದು ದಿನಾಂಕ: 17.12.2014 ರಂದು ಸಂಜೆ 6.00 ಗಂಟೆ ಒಳಗಾಗಿ ನಿಗದಿತ ಸ್ಥಳದಲ್ಲಿ ವರದಿ ಮಾಡಿಕೊಳ್ಳುವುದು.
- ಸ್ಪರ್ಧಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಮಾಡಲಾಗಿರುತ್ತದೆ.
- ಚಳಿಗಾಲ ಪ್ರಾರಂಭವಾಗಿರುವುದರಿಂದ ಸ್ಪರ್ಧಿಗಳು ಬರುವಾಗ ಹೊದಿಕೆಯನ್ನು ಮತ್ತು ಇತರೆ ಪರಿಕರಗಳನ್ನು ತರುವಂತೆ ಸಲಹೆ ನೀಡುವುದು.
- ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಸ್ಥಳದಲ್ಲಿಯೇ ನೀಡಲಾಗುವುದು.
- ಸ್ಪರ್ಧಿಗಳು ಬರುವಾಗ ಪ್ರಯಾಣ ಭತ್ಯೆ ವಿತರಿಸುವ ಸಲುವಾಗಿ ವೇತನ ದೃಢೀಕರಣ ಪತ್ರ ತರುವುದು ಹೆಚ್ಚಿನ ಮಾಹಿತಿಗಾಗಿ ಶ್ರೀ ಮಂಜುನಾಥಸ್ವಾಮಿ ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಯವರ ದೂರವಾಣಿ: 8277484163 ಹಾಗೂ ಶ್ರೀ ಬಸವಲಿಂಗಪ್ಪ ಶಿಕ್ಷಣಾಧಿಕಾರಿ ದೂರವಾಣಿ : **9448999394** ಇವರುಗಳನ್ನು ಸಂಪರ್ಕಿಸಲು ಕೋರಿದೆ.

( ಪ್ರಹ್ಲಾದಗೌಡ )
ಸಹನಿರ್ದೇಶಕರು ಹಾಗೂ ಪ್ರಭಾರಾಧಿಕಾರಿಗಳು

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ. ಮಾಹಿತಿಗಾಗಿ ಮತ್ತು ಮುಂದಿನಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
3. ಸಂಯೋಜಕರು, ರಾಜ್ಯಮಟ್ಟದ ಸಹಪಠ್ಯೇತರ ಚಟುವಟಿಕೆಗಳು, ಉಪನಿರ್ದೇಶಕರ ಕಚೇರಿ, ದಾವಣಗೆರೆ.
4. ಪ್ರಾಂಶುಪಾಲರು ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ದಾವಣಗೆರ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
4. ಕಚೇರಿ ಪ್ರತಿ.